'ನನ್ನ ಹೆಸರು' ಆತ ಹೇಳಿದ: 'ಜಗದೀಶ' ಎಂದು, 'ನಾನೊಬ್ಬ ರಾಜಕೀಯ ಕಾರ್ಯಕರ್ತ. ನನ್ನನ್ನು ಅರೆಸ್ಟ್ ಮಾಡಲು ವಾರೆಂಟ್‌ನೊಂದಿಗೆ ಪೊಲೀಸರು ಹಿಂಬಾಲಿಸುತ್ತಿದ್ದಾರೆ! ಅವರ ಕೈಗೆ ಸಿಕ್ಕಿದರೆ ಅವರು ನನ್ನನ್ನು ಬಡಿದು ಹದಬರಿಸುವರು! ನನ್ನನ್ನು ಕಾಪಾಡಬೇಕು!'

ಕೋರಿಕೆಯೊಡನೆ ಆತ ಮುಖವೆತ್ತಿದ. ಏನು ಮಾಡಬೇಕೆಂದರಿಯದೆ ಅವಳು ದಿಕ್ಕೆಟ್ಟು ನಿಂತಳು.

ಹೊರಗಿನಿಂದ ಆರ್ಭಟ ಸಮೀಪಿಸುತ್ತ ಬಂತು.

'ಅದೇ ಅಲ್ಲಿಂದ ಹೋದ! ಇಲ್ಲಿಂದ ಓಡಿದ! ನಾನು ನೋಡಿದೆ!' ಎನ್ನುವ ಶಬ್ದ!

ಅವಳ ಮುಖದಲ್ಲಿ ಬೆವರಹನಿಗಳು ಹೊಮ್ಮಿದವು. ಕಣ್ಣುಗಳು ಹೊಳೆದವು. ಅವಳು ಆತಂಕವನ್ನು ಮರೆಮಾಚಿ ಮೆಲ್ಲನೆ ಹೇಳಿದಳು:

'ಬನ್ನಿ!'

ಅವಳು ಒಳಗೆ ಹೋಗಿ ಹೊರಗೆ ಹೋಗಲಿರುವ ಬಾಗಿಲನ್ನು ಅಗಳಿಹಾಕಿ ಭದ್ರಪಡಿಸಿದಳು. ಒಂದು ಕುರ್ಚಿ ಎತ್ತಿಕೊಂಡು ಬಂದು ವರಾಂಡದಲ್ಲಿಟ್ಟು ಒಳಗೆ ಹೋಗಿ ಕುಪ್ಪಸತೊಟ್ಟು ಬಂದು ಬಾಗಿಲಿಗೆ ಒರಗಿ ನಿಂತಳು. ಜಗದೀಶ ಬಿಸಿಯುಸಿರು ಬೀರುತ್ತ ಕುರ್ಚಿಯಲ್ಲಿ ಕುಳಿತ. ಏನು ನಡೆಯುವುದಕ್ಕಿದೆ?

ಅನಿರೀಕ್ಷಿತ ಸಂದರ್ಭದಲ್ಲಿ ಅಪಾಯಗಳೇ ತುಂಬಿದ ಪರಿಸರದಲ್ಲಿ ಸಂಘರ್ಷದ ಬದುಕು! ಅವರು ಮುಖಕ್ಕೆ ಮುಖಕೊಟ್ಟು ನೋಡದೆ ಮೌನವಾಗಿ ಕಳೆದರು.

'ನಿಮ್ಮನ್ನು' ಅವಳು ಕೇಳಿದಳು: 'ಯಾಕೆ ಅರೆಸ್ಟ್ ಮಾಡ್ತಾರೆ?' ಆತ ಕಿಸೆಯಿಂದ ಪತ್ರ ತೆಗೆದು ಮುಂದೆ ಚಾಚಿದ. ಅವಳದನ್ನು ಬಿಡಿಸಿ ಓದಿ ಬಿಳಿಚಿದಳು. ಅವಳು ಪತ್ರವನ್ನು ಹಿಂತಿರುಗಿಸಿದಳು. ಮನಸ್ಸಿಗಾದ ಗೊಂದಲವನ್ನು ತೋರಗೊಡದೆ ಕೇಳಿದಳು:

'ಏನದು ಆ ಕಾಗದದ ಕಟ್ಟು?'

'ನನ್ನ ಬರಹಗಳು ಇತ್ಯಾದಿ. ಮತ್ತೆ ನಿಷೇಧಿಸಿದ ಪುಸ್ತಕಗಳು.'

'ಓಹ್!!' ಅವಳು ಕಡೆಗಣ್ಣಿನ ನೋಟ ಬೀರಿದಳು. ಬೆವರಿದರೂ ಸುಂದರ ಮುಖ, ಬಲಭಾಗದ ಕೆನ್ನೆಯಲ್ಲಿ ಕರ್‍ರಗಿನ ಕಲೆಯಿದೆ; ಅದುರದ ಪ್ರಶಾಂತ ಕಣ್ಣುಗಳು!

'ಭಾರ್ಗವಿ! ಭಾರ್ಗವಿ!' ಹಿಂಭಾಗದ ಬಾಗಿಲಿಗೆ ಬಡಿಯುತ್ತ ಕಠಿಣವಾದ ಒಂದು ಕರೆ! ಅವಳು ನಡುಕದೊಡನೆ ನೋಡಿದಳು. ಜಗದೀಶ ಬೆಚ್ಚಿ, ಎದ್ದುನಿಂತ. ಅವಳು ಬೆರಳುಗಳಿಂದ ತುಟಿಗಳನ್ನು ಒತ್ತಿಹಿಡಿದುಕೊಂಡು, ಕಣ್ಸನ್ನೆಯಿಂದ ಜಗದೀಶನನ್ನು ಕರೆದಳು. ಅಡುಗೆ ಕೋಣೆಯ ಬಾಗಿಲು ತೆರೆದು ಆತನನ್ನು ಒಳಗೆ ಕಳುಹಿಸಿದಳು.

'ಮಿಸುಕಾಡಬೇಡಿ!' ಎಂದು ಹೇಳಿ ಅವಳು ಬಾಗಿಲನ್ನು ಎಳೆದುಕೊಂಡಳು.

'ಎಲೆಗೇ ಭಾರ್ಗವಿ!' ಚಿಲಕವನ್ನು ಅಲುಗಾಡಿಸುತ್ತ ಶಬ್ದ ಜೋರಾಗಿ ಹೆಚ್ಚಿತು. ಜಗದೀಶ ರಾತ್ರಿಯಲ್ಲಿ ಬೆವತು ನಿಂತ. ಅವನ ದೇಹ ಗಡಗಡನೆ ನಡುಗುತ್ತಿತ್ತು. ಗಾಬರಿ! ದಾಹ! ಅವನಿಗೆ ಉಸಿರುಗಟ್ಟಿತು. ಮನೆಯ ಒಳಗೆ ಹೆಜ್ಜೆಗಳ ಶಬ್ದ! ಆತ ಕಿವಿಗೊಟ್ಟ: 'ಬೇಗನೆ!' ಆ ಎಲೆಕ್ಟ್ರಿಕ್ ಟಾರ್ಚ್ ಇಲ್ಲಿ ಕೊಡು.'

'ಅಪ್ಪಾ, ಯಾಕೆ!'

'ಹಿಡಿತಕ್ಕೆ ಸಿಕ್ಕಿತ್ತು... ರೂಪಾಯಿ ಎಷ್ಟೆಂದು ತಿಳಿದಿದೆಯಾ!...'

'ಅಪ್ಪ ನೀವು ಹೇಳುತ್ತಿರುವುದೇನು?'

'ಜಗದೀಶ ಆ ಭಯೋತ್ಪಾದಕ! ಅವನ ಗುಹೆಯನ್ನು ನಾವಿಂದು ಪುಡಿಗಟ್ಟಿದೆವು. ಅವನ ಮನೆಯ ಎಲ್ಲೆಡೆ ಕಾವಲಿದೆ. ಏನೇ ಆದರೂ ಅವನನ್ನು ಇವತ್ತು ರಾತ್ರಿ ಲಾಕಪ್ಪು ಸೇರಿಸುತ್ತೇನೆ. ನೋಡಬೇಕು ಅವನ ಸಾಮರ್ಥ್ಯ!'